ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸದ್ಯದ ಹಂತದಲ್ಲಿ ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿದೆ.

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯಲ್ಲಿ ಹೈಮಾಸ್ಟ್ ದೀಪ ಜೋಡಣೆ

1347 (857) ಶ್ರೀ ಹೊನ್ನಳ್ಳಿ ಜಬ್ಬಾರ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ): ಮಾನ್ಯ ನಗರಾಬಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯಲ್ಲಿ ಹೈಮಾಸ್ಟ ಲೈಟ್ ಜೋಡಿಸಲಿಕ್ಕೆ ಗುರುತು ಮಾಡಿದ ವೃತ್ತಗಳೆಷ್ಟು;

ಆ) ಈವರೆಗೆ ಎಷ್ಟು ವೃತ್ತಗಳಲ್ಲಿ ಅಳವಡಿಸಲಾಗಿದೆ;

ಇ) ಇನ್ನೂಳಿದ ವೃತ್ತಗಳಲ್ಲಿ ಎಷ್ಟು ತಿಂಗಳಲ್ಲಿ ಅಳವಡಿಸಲಾಗುತ್ತಿದೆ; ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) 16 ವೃತ್ತಗಳನ್ನು ಗುರುತಿಸಲಾಗಿದೆ.

ಆ) ಯಾವುದೇ ಹೈಮಾಸ್ಟ ಲೈಟಗಳನ್ನು ಇನ್ನೂ ಅಳವಡಿಸಿರುವುದಿಲ್ಲ.

ಇ) ಮೇಲಿನ (ಅ) ಉತ್ತರದಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಾಯುವ್ಯ ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆಯ ಆದಾಯ

1349 (862) ಶ್ರೀ ಹೊನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಪ್ರತ್ಯೇಕಗೊಳಿಸದ ನಂತರ ಬಂದ ಆದಾಯವೆಷ್ಟು; (ವರ್ಷವಾರು ವಿವರ ನೀಡುವುದು)

ಆ) ವಾಯುವ್ಯ ಕರ್ನಾಟಕ ಸಾರಿಗೆ ನಿಗಮವು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಬಸ್ಸುಗಳನ್ನು ಖರೀದಿಸಿದೆ; (ವರ್ಷವಾರು ವಿವರ ನೀಡುವುದು)

ಇ) ಉತ್ತರ ಕರ್ನಾಟಕದಲ್ಲಿ ಇನ್ನೂ ಎಷ್ಟು ಹಳ್ಳಿಗಳಿಗೆ ಸಾರಿಗೆ ಕಲ್ಪಿಸಬೇಕಾಗಿದೆ; ಯಾವಾಗ ಕಲ್ಪಿಸಲಾಗುವುದು?

ಶ್ರೀ ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ದಿನಾಂಕ 01.11.1997 ರಿಂದ ಪ್ರತ್ಯೇಕಗೊಂಡಿದ್ದು, ದಿನಾಂಕ 01.04.1998 ರಿಂದ ಆರ್ಥಿಕ ಸ್ವಾವಲಂಬನೆ ಪಡೆದಿರುತ್ತದೆ. ವರ್ಷವಾರು ಆದಾಯದ ವಿವರಗಳು ಈ ರೀತಿ ಇರುತ್ತದೆ.

ಅವಧಿ	ಲಕ್ಷ ರೂ.ಗಳಲ್ಲಿ
1998 – 99	34,56,858
1999 – 00	39,63,076
2000 – 01	44,10,161
2001 – 02	47,68,574
2002 – 03	42,95,985
(ಜನವರಿ 03ರ ಅಂತ್ಯದವರೆಗೆ)	